# ಅನೇಕ ಜನರು - ಅನೇಕ ದೃಷ್ಟಿಕೋನಗಳು

## ಲಲಿತಾ ಯದುವಂಶಿ

ಯಾವುದೇ ವಿಷಯವನ್ನು ಕುರಿತು ಯೋಚಿಸುವಾಗ ಅಥವಾ ಮಾತನಾಡುವಾಗ ಕೆಲವೊಮ್ಮೆ ವಿವಿಧ ಅಭಿಪ್ರಾಯಗಳ ನಡುವೆ ಒಮ್ಮತಕ್ಕೆ ಬರಲು ಸಾಧ್ಯ. ಆದರೆ ಕೆಲವೊಮ್ಮೆ ಇದು ಸಾಧ್ಯವಾಗುವುದಿಲ್ಲ. ಪ್ರಪಂಚವನ್ನು ಮುಕ್ತ ಕಣ್ಣಿನಿಂದ ನೋಡುವುದಕ್ಕಾಗಿ ಪ್ರತಿಯೊಬ್ಬರಲ್ಲಿಯೂ ತಮ್ಮದೇ ಆದ ದೃಷ್ಟಿಕೋನಗಳಿರುತ್ತವೆ. ತನ್ನ ಆಲೋಚನಾ ಕ್ರಮದ ಪ್ರಕಾರ ವ್ಯಕ್ತಿಯು ಈ ಪ್ರಪಂಚವನ್ನು ನೋಡುತ್ತಾನೆ. ನಾವು ಬದುಕಿನಲ್ಲಿ ಯಶಸ್ಸನ್ನು ಗಳಿಸುವಷ್ಟರ ಮಟ್ಟಿಗೆ ನಮ್ಮ ಯೋಚನಾ ಕ್ರಮವು ಪರಿಣಾಮ ಬೀರುತ್ತದೆ. ನಾವು ನಮ್ಮನ್ನು, ನಮ್ಮ ಕುಟುಂಬವನ್ನು ಮತ್ತು ಗೆಳೆಯರನ್ನು ಧನಾತ್ಮಕ ದೃಷ್ಟಿಕೋನದಿಂದ ನೋಡಬೇಕು ಹಾಗೂ ಅವರಿಗೂ ಧನಾತ್ಮಕತೆಯನ್ನು ನೀಡಬೇಕು. ಬದುಕಿನ ಯಾವುದೇ ವಿಷಯದಲ್ಲಿ ಒಬ್ಬ ವ್ಯಕ್ತಿಯು ಕಟ್ಟುನಿಟ್ಟಿನ ಗ್ರಹಿಕೆಯನ್ನು ಅಳವಡಿಸಿಕೊಳ್ಳುವ ಮೊದಲು ವಿವಿಧ ಆಯಾಮಗಳನ್ನು ಅರಿತುಕೊಂಡು ಯಾವುದೇ ನಿರ್ಧಾರಕ್ಕೆ ಬರಬೇಕು. ಪ್ರತಿಕೂಲತೆಯ ನಡುವೆಯೂ ನಾವು ಸಂಭಾವ್ಯತೆಯತ್ತ ಎದುರು ನೋಡಿದಾಗ ಅದು ಬದುಕಿನತ್ತ ನಾವು ಹೊಂದಿರುವ ಧನಾತ್ಮಕ ಮನೋಭಾವವನ್ನು ತೋರಿಸುತ್ತದೆ. ಏಕೆಂದರೆ, ಏನನ್ನೂ ಮಾಡದೆ ಸುಮ್ಮನೆ ಕುಳಿತರೆ ಯಾವುದೇ ಪ್ರಯೋಜನವಾಗುವುದಿಲ್ಲ.

ಬದುಕಿನಲ್ಲಿ ಯಶಸ್ಸನ್ನು ಪಡೆಯಬೇಕಾದರೆ ನಾವು ಧನಾತ್ಮಕ ಮನೋಭಾವವನ್ನು ಮೈಗೂಡಿಸಿಕೊಳ್ಳಬೇಕು. ನಮ್ಮ ಮನಸ್ಸಿನಲ್ಲಿ ನಾವು ಧನಾತ್ಮಕ ಚಿಂತನೆಯ ಬೀಜವನ್ನು ಬಿತ್ತುವ ತನಕ ನಮ್ಮ ಯಶಸ್ಸಿನ ಪ್ರಮಾಣವು ಹೆಚ್ಚುವುದಿಲ್ಲ. ಕೆಲವೊಂದು ಸನ್ನಿವೇಶಗಳಲ್ಲಿ, ನಮಗೆ ಇಂತಹ ಪರಿಸ್ಥಿತಿಯ ಕುರಿತು ಹೆಚ್ಚೇನೂ ತಿಳಿದಿಲ್ಲ ಎಂದು ಜನರು ಹೇಳುವುದನ್ನು ನಾವು ಕೇಳಿದ್ದೇವೆ. ಅಥವಾ ಅವರು ಒಂದು ನಿರ್ದಿಷ್ಟ ರೀತಿಯಲ್ಲಿ ಯೋಚಿಸುತ್ತಾರೆ ಹಾಗೂ ನೀವೇನು ಯೋಚಿಸುತ್ತೀರೋ ಅದು ನಿಮ್ಮ ದೃಷ್ಟಿಕೋನವಾಗಿರುತ್ತದೆ. ಸಂವಾದ ಮತ್ತು ಮಾತುಕತೆಯ ವೇಳೆ ನಮ್ಮ ದೃಷ್ಟಿಕೋನವು ಅಹಂನ ಕಠಿಣ ಅಭಿವ್ಯಕ್ತಿಯಾಗುವುದನ್ನು ನಾವು ನೋಡುತ್ತೇವೆ ಹಾಗೂ ಇತರ ಜನರ ಯೋಚನೆಗಳನ್ನು ಅರ್ಥ ಮಾಡಿಕೊಳ್ಳುವುದು ನಮ್ಮ ಪಾಲಿಗೆ ಕಷ್ಟದ ಕೆಲಸವೆನಿಸುತ್ತದೆ. ಅಲ್ಲದೆ ನಮ್ಮ ದೃಷ್ಟಿಕೋನಕ್ಕೆ ಹೊಂದಿಕೊಳ್ಳದೆ ಇರುವ ದೃಷ್ಟಿಕೋನವನ್ನು ಕುರಿತು

ಅಸಹಿಷ್ಣುತೆಯನ್ನು ವ್ಯಕ್ತಪಡಿಸುತ್ತೇವೆ. ಯಾವುದೇ ಸಂವಾದವು ಅರ್ಥಪೂರ್ಣವೆನಿಸಬೇಕಾದರೆ ಪ್ರತಿಯೊಬ್ಬ ವ್ಯಕ್ತಿಯು ತನ್ನ ವಿಚಾರಗಳನ್ನು ಮುಕ್ತವಾಗಿ ವ್ಯಕ್ತಪಡಿಸುವುದು ಹಾಗೂ ಅನಂತರ ಉತ್ಪಾದಕ ಮತ್ತು ಧನಾತ್ಮಕ ರೀತಿಯಲ್ಲಿ ಮುಕ್ತ ಚರ್ಚೆಗೆ ಮತ್ತು ಆಲೋಚನೆಗೆ ಅವಕಾಶ ನೀಡುವುದು ಅತ್ಯಗತ್ಯ.

ಒಬ್ಬ ಶಿಕ್ಷಕಿಯಾಗಿ ಏನಾದರೂ ವಿಷಯದ ಕುರಿತು ಮಾತನಾಡುವಾಗ ವಿದ್ಯಾರ್ಥಿಗಳು ಮತ್ತು ತರಗತಿಯನ್ನು ಕುರಿತು ಉಲ್ಲೇಖ ಮಾಡದೆ ಇರುವುದು ಕಷ್ಟವೆನಿಸುತ್ತದೆ. ಹೀಗಾಗಿ ನನ್ನ ಡೈರಿಯಿಂದ ಒಂದು ಕಥೆಯನ್ನು ಇಲ್ಲಿ ನಿರೂಪಿಸುತ್ತೇನೆ. ಕೆಲ ಸಮಯದ ಹಿಂದೆ ಯಾವುದೋ ಒಂದು ನಿರ್ದಿಷ್ಟ ವಿಷಯವನ್ನು ಕುರಿತು ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವಾಗ ಈ ಘಟನೆ ನಡೆದಿತ್ತು. ಈ ಚರ್ಚೆಯ ವೇಳೆ ಅವರ ಮನಸ್ಸು ಮತ್ತು ಚಿಂತನೆಯನ್ನು ಅರಿತುಕೊಳ್ಳಲು ನನಗೆ ಸಾಧ್ಯವಾಯಿತು.

ಇದು ದಿನಾಂಕ ೪ ಫೆಬ್ರುವರಿ ೨೦೧೫ ರಂದು ಒಂದು ಕಥೆಯನ್ನು ಕುರಿತು ನಾವು ಕೆಲಸ ಮಾಡುತ್ತಿದ್ದ ವೇಳೆ ಸಂಭವಿಸಿತ್ತು. ಆ ಕಥೆಯನ್ನು ಮಾತನಾಡುವ ಮುಖವಾಡಗಳ ಮೂಲಕ ವಿವರಿಸಲಾಗುತ್ತಿತ್ತು ಹಾಗೂ ವಿವಿಧ ಭಾವನೆಗಳನ್ನು ವ್ಯಕ್ತಪಡಿಸುವ ಚಿತ್ರಗಳನ್ನು ಬಿಡಿಸಲಾಯಿತು. ಈ ಚಟುವಟಿಕೆಯನ್ನು ಆಯೋಜಿಸುವುದರ ಹಿಂದಿನ ನನ್ನ ಉದ್ದೇಶವು, ಮಕ್ಕಳು ಯಾವುದೇ ಚಿತ್ರ, ಘಟನೆ, ಸುದ್ದಿ, ಭಾವನೆ, ಕಥೆ ಅಥವಾ ವಸ್ತುವನ್ನು ನೋಡಿ ಹಾಗೂ ಅದನ್ನು ಕೇಳಿ, ಓದಿ ಅಥವಾ ನೋಡಿ ಅದರ ಸಹಜ ಭಾವನೆ/ಅಭಿವ್ಯಕ್ತಿಯನ್ನು ಅರ್ಥಮಾಡಿಕೊಳ್ಳುವುದು ಹಾಗೂ ಸರಳ ಮತ್ತು ಸ್ಪಷ್ಟ ಭಾಷೆಯಲ್ಲಿ ಅವುಗಳ ಕಾರಣಗಳನ್ನು ವಿವರಿಸಿ ತೀರ್ಮಾನಕ್ಕೆ ಬರುವುದಾಗಿತ್ತು.

ಆರಂಭದಲ್ಲಿ ಪ್ರತಿಯೊಬ್ಬರೂ ತಮ್ಮ ಕಣ್ಣುಗಳನ್ನು ಮುಚ್ಚಿದ್ದರು. ಅವರಿಗೆ ನಿಧಾನವಾಗಿ ಸೂಚನೆಗಳನ್ನು ನೀಡಲಾಯಿತು. ಅವರು ಅನುಭವಿಸಿದ ಯಾವುದೇ ಘಟನೆ ಅಥವಾ ಭಾವನೆಯನ್ನು ಅವರು ಪಿಸು ದನಿಯಲ್ಲಿ ನೆನಪಿಸಿಕೊಳ್ಳಬೇಕಾಗಿತ್ತು ಹಾಗೂ ಇತರರೊಂದಿಗೆ ಹಂಚಿಕೊಳ್ಳಬೇಕಾಗಿತ್ತು. ಒಮ್ಮೆ ಅವರು ಇದನ್ನು ಯೋಚಿಸಿದ ಅನಂತರ ಅವರು ಕಣ್ಣುಗಳನ್ನು ತೆರೆಯಬೇಕಾಗಿತ್ತು ಹಾಗೂ ಇತರ ವಿದ್ಯಾರ್ಥಿಗಳಿಗೆ ತೊಂದರೆ ಕೊಡದೆ ಕುಳಿತುಕೊಳ್ಳಬೇಕಾಗಿತ್ತು. ವಿದ್ಯಾರ್ಥಿಗಳು ನನ್ನ ಸೂಚನೆಗಳನ್ನು ಪಾಲಿಸಿದರು ಹಾಗೂ ಅವರು ನೆನಪಿಸಿಕೊಂಡಿದ್ದನ್ನು ಇತರರೊಂದಿಗೆ ನಿಖರವಾಗಿ ಹಂಚಿಕೊಂಡರು ಹಾಗೂ ಅದರೊಂದಿಗೆ ಅಡಕಗೊಂಡಿರುವ ಭಾವನೆಯನ್ನು

ತಿಳಿಸಿದರು. ಕೆಲವೊಂದು ಭಾವನೆಗಳು ಮದುವೆ ಮತ್ತು ಪುಸ್ತಕಗಳಿಗೆ ಸಂಬಂಧಿಸಿದರೆ ಇನ್ನು ಕೆಲವು ಭಾವನೆಗಳು ಮನೆ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದವು. ಅನಂತರ ಅವರು ಹೇಳಿದ ವಿಚಾರವನ್ನು ನಾಲ್ಕು ಮುಖವಾಡಗಳಲ್ಲಿ ಯಾವುದಾದರೂ ಒಂದರ ಜೊತೆಗೆ ಸಂಪರ್ಕಿಸಲು ಹೇಳಿದೆ. ಅವರದ್ದೇ ಆದ ಚಿಂತನೆಯ ಪ್ರಕಾರ, ಅವರು ನಿರ್ದಿಷ್ಟವಾದ ಒಂದು ಮುಖವನ್ನು ಆರಿಸಿದರು ಮತ್ತು ತಾವಾಗಿಯೇ ಅದನ್ನು ವಿವರಿಸಿದರು. ನಾವು ಏನಾದರೂ ಒಂದನ್ನು ಕೇಳಿದಾಗ, ಓದಿದಾಗ ಅಥವಾ ನೋಡಿದಾಗ ನಮಗೆ ಹಿತಕರ ಅನುಭವವಾಗುತ್ತದೆ, ಆದರೆ ಇತರರಿಗೆ ಈ ಅನುಭವ ಉಂಟಾಗುವುದಿಲ್ಲ ಎಂಬುದನ್ನು ಮಕ್ಕಳು ಅರ್ಥ ಮಾಡಿಕೊಂಡರು. ಹಾಗೂ ಇದರ ಹಿಂದೆ ಪ್ರತಿಯೊಬ್ಬರೂ ಬೇರೆ ಬೇರೆ ಕಾರಣಗಳನ್ನು ಹೊಂದಿರಬಹುದು.

ತರಗತಿಯನ್ನು ಮುಂದುವರಿಸುವುದಕ್ಕಾಗಿ ನಾನು ಮುಂದಿನ ಚಟುವಟಿಕೆಯನ್ನು ಪ್ರಾರಂಭಿಸಿದೆ. ಕಪ್ಪುಹಲಗೆಯ ಮೇಲೆ ಎರಡು ವಿವರಣಾತ್ಮಕ ಚಿತ್ರಗಳನ್ನು ಬಿಡಿಸಲಾಯಿತು. ಈ ಚಿತ್ರಗಳನ್ನು ಕುರಿತು ಯಾವುದೇ ಚರ್ಚೆ ನಡೆಯಲಿಲ್ಲ. ಆ ಚಿತ್ರಗಳನ್ನು ನೋಡಿ ಅವರಿಗೆ ಹೇಗನಿಸಿತು ಹಾಗೂ ಯಾಕೆ ಈ ರೀತಿ ಅನಿಸಿತು ಎಂದು ಹೇಳಲು ಮಕ್ಕಳಿಗೆ ತಿಳಿಸಲಾಯಿತು. ಇದಕ್ಕಾಗಿ ಮಕ್ಕಳಿಗೆ ಒಂದಷ್ಟು ಸಮಯವನ್ನು ನೀಡಲಾಯಿತು. ಚಿತ್ರಗಳನ್ನು ಮುಖವಾಡದೊಂದಿಗೆ ಸಂಪರ್ಕಿಸಿ ಅನಂತರ ಅವರು ಅದನ್ನು ಯಾಕೆ ಆರಿಸಿದ್ದಾರೆ ಎಂಬುದನ್ನು ವಿವರಿಸಲು ನಾನು ಅವರಿಗೆ ತಿಳಿಸಿದೆ. ಚಿತ್ರಗಳನ್ನು ಕುರಿತು ಮಕ್ಕಳು ವ್ಯಕ್ತಪಡಿಸಿದ ಅಭಿಪ್ರಾಯ ಮತ್ತು ಅರ್ಥ ವಿವರಣೆಯನ್ನು ನೋಡಿ ನನಗೆಯೇ ಅಚ್ಚರಿಯಾಯಿತು. ಒಂದು ಚಿತ್ರವನ್ನು ಕುರಿತು ಅರ್ಥ ವಿವರಣೆ ನೀಡುತ್ತಾ ಒಬ್ಬ ವಿದ್ಯಾರ್ಥಿ ಈ ರೀತಿ ಹೇಳಿದ: ನಾನು ಈ ಚಿತ್ರವನ್ನು ಇಷ್ಟಪಡುತ್ತೇನೆ, ಏಕೆಂದರೆ ನದಿಯು ಶಾಲೆಯ ಪಕ್ಕದಲ್ಲಿದೆ; ಹೀಗಾಗಿ ಈಜಾಡುತ್ತಾ ಹಾಗೂ ಶಾಲೆಗೆ ಬರುವಾಗ ಸಮಯವನ್ನು ಚೆನ್ನಾಗಿ ಕಳೆಯಬಹುದು. ಆದರೆ ಇನ್ನೊಬ್ಬ ಮಗುವು ಬೇಸರವನ್ನು ವ್ಯಕ್ತಪಡಿಸುವ ಮುಖವಾಡವನ್ನು ಆರಿಸಿದ. ಏಕೆಂದರೆ ಆತನ ಪ್ರಕಾರ ಆ ಚಿತ್ರವು, ಮಕ್ಕಳು ಶಾಲೆಯಲ್ಲಿ ಸಮಯವನ್ನು ಚೆನ್ನಾಗಿ ಕಳೆದು ವಾಪಾಸ್ ಹೋಗುವುದಕ್ಕೆ ಸಂಬಂಧಿಸಿತ್ತು.

ಎಲ್ಲ ಮಕ್ಕಳು ಪ್ರತಿಯೊಬ್ಬರ ಅನಿಸಿಕೆಗಳು, ತಮ್ಮ ಆಯ್ಕೆಗಳಿಗೆ ನೀಡಿದ ಕಾರಣಗಳು ಮತ್ತು ವ್ಯಾಖ್ಯಾನಗಳನ್ನು ಎಚ್ಚರಿಕೆಯಿಂದ ಕೇಳಿಸಿಕೊಂಡರು. ಎಲ್ಲವನ್ನು ಕೇಳಿಸಿಕೊಂಡ ಅನಂತರ ನಾನು ಅವರಿಗೆ ಕೊನೆಯದಾಗಿ ಒಂದು ಕೆಲಸವನ್ನು ನೀಡಿದೆ. ಕಥೆಯನ್ನು ನೋಡಿದಾಗ ಈ ಕಥೆಯು ಸಂತಸದಿಂದ

ಕೊನೆಗೊಳ್ಳುತ್ತದೆಯೇ ಅಥವಾ ಬೇಸರದಿಂದ ಕೊನೆಗೊಳ್ಳುತ್ತದೆಯೇ ಎಂಬುದನ್ನು ಕಾರಣದೊಂದಿಗೆ ವಿವರಿಸಲು ನಾನು ಅವರಿಗೆ ಹೇಳಿದೆ. ಕಥೆಯ ಯಾವ ಹಂತದಲ್ಲಿ ನಿಮಗೆ ಸಂತಸ ಕಾಣಿಸಿತು? ನಿಮಗೆ ಯಾವಾಗ ಬೇಸರ ಕಾಣಿಸಿತು? ನಿಮಗೆ ಯಾವುದು ತೊಂದರೆ ನೀಡಿತು? ಯಾವುದು ನಿಮಗೆ ಕೋಪ ತರಿಸಿತು? ಕಥೆಯ ಯಾವ ಅಂಶವು ನಿಮಗೆ ಹೆಚ್ಚು ಇಷ್ಟವಾಯಿತು ಹಾಗೂ ಯಾವುದು ಅತ್ಯಂತ ನಿರಾಶೆಗೆ ಕಾರಣವಾಯಿತು? ಎಲ್ಲರೂ ಮನೆಗೆ ಹೋಗಿ ಈ ಎಲ್ಲ ಪ್ರಶ್ನೆಗಳ ಕುರಿತು ಯೋಚಿಸಲು ನಾನು ಅವರಿಗೆ ತಿಳಿಸಿದೆ. ಈ ಎಲ್ಲ ವಿಚಾರಗಳನ್ನು ಕುರಿತು ಮುಂದಿನ ದಿನದ ತರಗತಿಯಲ್ಲಿ ಚರ್ಚಿಸುವುದಾಗಿ ನಾನು ಹೇಳಿದೆ. ತರಗತಿಯನ್ನು ಮುಗಿಸಿ ತರಗತಿ ಕೋಣೆಯಿಂದ ಹೊರಗೆ ಹೋಗುವಾಗ ಒಬ್ಬ ವಿದ್ಯಾರ್ಥಿಯು ನನಗೆ ಈ ರೀತಿ ಕೇಳಿದ: ಮೇಡಂ, ನೀವು ಈ ಚಿತ್ರಗಳನ್ನು ಬಿಡಿಸುವಾಗ ನಿಮ್ಮ ಮನಸ್ಸಿನಲ್ಲಿ ಏನಿತ್ತು?

ನಮ್ಮ ದೃಷ್ಟಿಕೋನ/ ಗ್ರಹಿಕೆಯು  ಬಾಲ್ಯದಿಂದಲೂ ನಾವು ಏನನ್ನು ಕೇಳುತ್ತಾ ಬರುತ್ತೇವೆಯೋ ಅಥವಾ ನಾವು ಬೆಳೆದಿರುವ ಪರಿಸರದ ಮೇಲೆಯೋ ಅವಲಂಬಿಸಿರುತ್ತದೆ. ಕೆಲ ಜನರ ಪಾಲಿಗೆ ಸಮಯ ಮತ್ತು ಹೊಸ ಅನುಭವಗಳು ಅವರ ದೃಷ್ಟಿಕೋನ/ ಗ್ರಹಿಕೆಯನ್ನು ಬದಲಾಯಿಸುತ್ತವೆ. ಆದರೆ ಉಳಿದ ಕೆಲವರ ಬದುಕಿನಲ್ಲಿ ಇದು ಕೊನೆಯ ತನಕ ಬದಲಾಗುವುದಿಲ್ಲ. ಪ್ರತಿಯೊಬ್ಬರಿಗೂ ತಮ್ಮದೇ ಆದ ಚಿಂತನಾ ಶೈಲಿ ಇದೆ. ಒಂದೇ ಸನ್ನಿವೇಶವನ್ನು ಬೇರೆ ಬೇರೆ ಜನರು ಬೇರೆ ಬೇರೆ ರೀತಿಯಲ್ಲಿ ನೋಡಬಹುದು. ಆ ವ್ಯಕ್ತಿಯ ಪ್ರಕಾರ ಆತನು ಅತ್ಯುತ್ತಮವಾದುದನ್ನೇ ಮಾಡುತ್ತಿರಬಹುದು. ಆದರೆ ಇತರರ ದೃಷ್ಟಿಕೋನದಿಂದಲೂ ನೋಡಲು ನಾವು ಯೋಚಿಸಬೇಕು. ಈ ಪ್ರಪಂಚವನ್ನು ನೋಡುವ ನಮ್ಮ ಗ್ರಹಿಕೆಯನ್ನು ಬಲಪಡಿಸಲು ಮತ್ತು ಅದಕ್ಕೆ ಸ್ಪಷ್ಟತೆಯನ್ನು ನೀಡಲು ನಾವು ಈ ಪ್ರಪಂಚ ಮತ್ತು ನಮ್ಮ ಸುತ್ತಮುತ್ತ ಇರುವ ಜನರನ್ನು ನೋಡುವ, ಯೋಚಿಸುವ ಮತ್ತು ಅರ್ಥ ಮಾಡಿಕೊಳ್ಳುವ ರೀತಿಯನ್ನು ಬದಲಾಯಿಸಬೇಕು. ಏಕೆಂದರೆ ನಾವು ನೋಡುವ, ಯೋಚಿಸುವ ಮತ್ತು ವ್ಯಾಖ್ಯಾನಿಸುವ ರೀತಿಯು ನಮ್ಮನ್ನು ರೂಪುಗೊಳಿಸುತ್ತದೆ ಮತ್ತು ನಾವು ಸಾಗಿಸುವ ಬದುಕಿನ ಮೇಲೆ ಪ್ರಭಾವ ಬೀರುತ್ತದೆ. ನಮ್ಮ ನಿಲುವು ಧನಾತ್ಮಕ ಮತ್ತು ಆಶಾವಾದಿ ಚಿಂತನೆಗಳನ್ನು ಹೊಂದಿರಬೇಕು. ಅಲ್ಲದೆ ಸಂವಾದ ಮತ್ತು ಚರ್ಚೆಗೆ ಆಸ್ಪದವಿರಬೇಕು.

ಲಲಿತಾ ಅವರು ಪ್ರಸ್ತುತ, ರಾಜಸ್ಥಾನದ ಟೋಂಕ್ ನಲ್ಲಿರುವ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಹಿಂದಿ ಮತ್ತು ಇಂಗ್ಲಿಷ್ ಅನ್ನು ಕಲಿಸುತ್ತಿದ್ದಾರೆ. ಅವರು ಶಿಕ್ಷಣದಲ್ಲಿ ಪದವಿ ಮತ್ತು ಹಿಂದಿ ಹಾಗೂ ಶಿಕ್ಷಣದಲ್ಲಿ ಸ್ನಾತಕೋತ್ತರ

ಪದವಿಗಳನ್ನು ಪಡೆದಿದ್ದಾರೆ. ಅವರು ೨೦೦೫ರಿಂದ ವಿವಿಧ ಸಂಸ್ಥೆಗಳಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಓದುವುದು, ಸಂಗೀತ ಕೇಳುವುದು ಮತ್ತು ಪ್ರಯಾಣಿಸುವುದು ಇತ್ಯಾದಿಗಳು ಅವರ ಹವ್ಯಾಸಗಳಾಗಿವೆ. ಅವರನ್ನು lalita.yaduvanshi@azimpremjifoundation.org ಇಮೇಲ್ ಐಡಿಯ ಮೂಲಕ ಸಂಪರ್ಕಿಸಬಹುದು.